**ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ**

ನಂ. 74/2, ಜಾರಕಬಂಡೆ ಕಾವಲ್, ಅಟ್ಟೂರು ಅಂಚೆ, ಯಲಹಂಕ ಮಾರ್ಗ, ಬೆಂಗಳೂರು -560064.

**ಸ್ಥಳೀಯ ಆರೋಗ್ಯ ಪರಂಪರೆಗಳು ಮತ್ತು ನೀತಿಕೇಂದ್ರ**

# ಮಾಹಿತಿಕರಪತ್ರ

## ಸಾಂಪ್ರದಾಯಿಕ ಸಮುದಾಯ ಆರೋಗ್ಯ ಪೂರೈಕೆದಾರರುಗಳಿಗಾಗಿ ಸ್ವಯಂ ಪ್ರಮಾಣಿತ ಯೋಜನೆ

## (VCSTCHPs)

VCSTCHP ಯೋಜನೆಯು ಐಎಸ್ಒ 17024 ಪ್ರಕಾರ ಅಂತಾರಾಷ್ಟ್ರೀಯ ರೂಢಿಗಳ ಅನುಸಾರ, ಸಾಂಪ್ರದಾಯಿಕ ವೈದ್ಯರುಗಳ ಪೂರ್ವ ಕಲಿಕೆಯನ್ನು ಧೃಡೀಕರಿಸಲು ಸ್ಥಳೀಯ ಆರೋಗ್ಯ ಪರಂಪರೆಗಳು ಪುನರುತ್ಥಾನ ಪ್ರತಿಷ್ಠಾನ (FRLHT), ಬೆಂಗಳೂರು ಮತ್ತು ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ (QCI), ನವದೆಹಲಿಯ ಸ್ಥಾಪನೆಯ ರಾಷ್ಟ್ರೀಯ ಯೋಜನೆಯಾಗಿದೆ.

ಭಾರತದಲ್ಲಿ ನಮ್ಮ ಜನರ ಆರೋಗ್ಯದ ಅಗತ್ಯತೆಗಳನ್ನು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಪೂರೈಸುವಲ್ಲಿ ಸಾಂಪ್ರದಾಯಿಕ ಸಮುದಾಯ ಆರೋಗ್ಯ ಪೂರೈಕೆದಾರರು (TCHPs) ಪ್ರಮುಖ ಪಾತ್ರವಹಿಸಿದ್ದಾರೆ. ಆಯುಶ್ (ಆಯುರ್ವೇದ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ, ಯುನಾನಿ, ಸಿದ್ಧ ಮತ್ತು ಹೋಮಿಯೋಪಥಿ) ಸಮುದಾಯದ ಬೆಂಬಲಿತ ಪ್ಯಾರಾಮೆಡಿಕಲ್ ಆರೋಗ್ಯ ಕಾರ್ಯಕರ್ತರಲ್ಲಿ ಅವರು ಒಂದು ಅನನ್ಯ ಗುಂಪು. ಇವರು ಸಾಮಾನ್ಯ ಅಸ್ವಸ್ಥತೆಗಲಿಗೆ ಸಂಬಂಧಿಸಿದ ಕಾಮಾಲೆ, ಉಳುಕು, ಮೂಳೆಯ ಮುರಿತಗಳು, ಮಕ್ಕಳ ಜನ್ಮ, ಮಹಿಳೆಯರು ಮತ್ತು ಮಕ್ಕಳ ಅರೋಗ್ಯ, ವಿಷಕಾರಿ ಕಡಿತ, ಚರ್ಮದ ರೋಗಗಳು, ಸುಟ್ಟ ಗಾಯ ಇತ್ಯಾದಿಗಳ ನಿರ್ವಹಣೆಗೆ ಸರಳವಾದ ಪ್ರಾಥಮಿಕ ಆರೋಗ್ಯದಿಂದ ಚಿಕಿತ್ಸೆ ನೀಡುತ್ತಾರೆ. ಅವರು ತಮ್ಮ ಸಾಮಾಜಿಕ ನ್ಯಾಯಸಮ್ಮತತೆಯನ್ನು ಆಧರಿಸಿ ಅಗತ್ಯವಿರುವ ಮತ್ತು ಬಡ ರೋಗಿಗಳಿಗೆ ಚಿಕಿತ್ಸೆ ನೀಡುತ್ತಾರೆ. ಭಾರತೀಯ ವೈದ್ಯ ಪದ್ಧತಿ ನೀತಿ ಹೇಳಿಕೆ (2002), ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಹೇಳಿಕೆ (2005) ಮತ್ತು ಯೋಜನಾ ಆಯೋಗ, ಭಾರತ ಸರ್ಕಾರ (2007 ಮತ್ತು 2012) ಮತ್ತು ರಾಷ್ಟ್ರೀಯ ಆರೋಗ್ಯ ನೀತಿ 2017 ರ ಪಂಚವಾರ್ಷಿಕ ಯೋಜನೆಗಳು ಸಾಂಪ್ರದಾಯಿಕಸಮುದಾಯ ಆರೋಗ್ಯ ಪೂರೈಕೆದಾರರ ಅಸ್ತಿತ್ವ ಮತ್ತು ಪ್ರಸ್ತುತತೆಯನ್ನು ಅಧಿಕೃತವಾಗಿ ಧೃಡೀಕರಿಸುತ್ತವೆ. ಈ ಸಮುದಾಯ ಬೆಂಬಲಿತ ಆಯುಶ್

ಪ್ಯಾರಾಮೆಡಿಕಲ್ ಅರೋಗ್ಯ ಕಾರ್ಯಕರ್ತರ ಸಾಮರ್ಥ್ಯವನ್ನು ಬಲಪಡಿಸಲು ಮತ್ತು ನಿರ್ಮಿಸಲು, ರಾಷ್ಟ್ರೀಯ ಅಥವಾ ರಾಜ್ಯ ಕಾರ್ಯಕ್ರಮಗಳನ್ನು, ಸರ್ಕಾರಿ ಸಂಸ್ಥೆಗಳು ವಿನ್ಯಾಸಗೊಳಿಸಬೇಕಾಗಿದೆ.

ಈ ನಿರ್ಲಕ್ಷ್ಯವೂ ನಮ್ಮ ದೇಶದ ಸಾಂಪ್ರದಾಯಿಕ ಸಮುದಾಯ ಅರೋಗ್ಯ ಪೂರೈಕೆದಾರರ ಶ್ರೇಷ್ಠ ಸಂಪ್ರದಾಯದ ನಿರಂತರತೆಯನ್ನು ಪ್ರತಿಬಂಧಿಸುತ್ತದೆ. ಸಾರ್ವಜನಿಕ ಅರೋಗ್ಯ ವ್ಯವಸ್ಥೆಯಲ್ಲಿ ಮಾನವ ಸಂಪನ್ಮೂಲ ಬೇಡಿಕೆಯನ್ನು ಪೂರೈಸುವ ಸಲುವಾಗಿ, ಸಾರ್ವಜನಿಕ ಆರೋಗ್ಯ ತಜ್ಞರು ಮತ್ತು ವೃತ್ತಿಪರರು TCHP ಗಳಿಗೆ ಸ್ವಯಂಪ್ರೇರಿತ ಪ್ರಮಾಣೀಕರಣ ಯೋಜನೆಯ ಮೂಲಕ ಸಾಂಪ್ರದಾಯಿಕ ಸಮುದಾಯ ಆರೋಗ್ಯ ಪೂರೈಕೆದಾರರುಗಳ ಸಾಮರ್ಥ್ಯವನ್ನು ದೃಡೀಕರಿಸಲು ಮತ್ತು ನಿರ್ಮಿಸಲು ಶಿಫಾರಸು ಮಾಡಿದಾರೆ.

ಭಾರತದ್ ಗುಣಮಟ್ಟ ಸಂಸ್ಥೆ (www.qcin.org) ಅನುಮೋದಿಸಿದ ಪ್ರಮಾಣೀಕರಣದ ಅಂಗವಾದ, ಅಂತರ್-ವಿಷಯ ಅರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ (TDU) ಸ್ಥಳೀಯ ಅರೋಗ್ಯ ಪರಂಪರೆಗಳ ಮತ್ತು ನೀತಿ ಕೇಂದ್ರವು (CLHT&P) ಅರ್ಹ ಅಭ್ಯರ್ಥಿಗಳ ಅರ್ಜಿಗಳನ್ನು (ಸಾಂಪ್ರದಾಯಿಕ ಸಮುದಾಯ ಅರೋಗ್ಯ ಪೂರೈಕೆದಾರರು) ಆಹ್ವಾನಿಸಿದೆ.

QCI&FRLHT ಪ್ರಾರಂಭಿಸಿರುವ ಸ್ವಯಂ ಪ್ರಮಾಣಿತ ಯೋಜನೆಯಡಿಯಲ್ಲಿ, ಸಾಂಪ್ರದಾಯಿಕ ಸಮುದಾಯ ಅರೋಗ್ಯ ಪೂರೈಕೆದಾರರು, ತಮ್ಮ ಪ್ರಮಾಣೀಕರಣವನ್ನು ಈ ಕೆಳಕಂಡ ವಿಷಯಗಳಲ್ಲಿ ಪಡೆಯಬಹುದಾಗಿದೆ: ಸಾಮಾನ್ಯ ಕಾಯಿಲೆಗಳು, ಕಾಮಾಲೆ , ಸಂಧಿವಾತ/ಕೀಲು ನೋವು, ಸಾಂಪ್ರದಾಯಿಕ ಮೂಳೆ ಜೋಡಣೆ , ಸಾಂಪ್ರದಾಯಿಕ ಜನನ ಪರಿಚಾರಕರು ಮತ್ತೂ ವಿಷಕಾರಿ ಕಡಿತ . ಈ ಯೋಜನೆಯ ಪ್ರಮುಖ ಲಕ್ಷಣಗಳು ಹೀಗಿವೆ:

**ಉದ್ದೇಶ**: ಜ್ಞಾನ ಮತ್ತು ಕೌಶಲ್ಯಗಳ ಮೂರನೇ ವ್ಯಕ್ತಿಯ ಮೌಲ್ಯಮಾಪನದ ಮೂಲಕ ಅರ್ರ ಸಾಮರ್ಥ್ಯದ ಮೌಲ್ಯಮಾಪನದ ಪ್ರಮಾಣೀಕರಣವನ್ನು ಪಡೆಯಲು ಆಸಕ್ತಿದಾಯಕ ಸಾಂಪ್ರದಾಯಿಕ ಸಮುದಾಯ ಅರೋಗ್ಯ ಪೂರೈಕೆದಾರರುರಿಗೆ (TCHP) ಅವಕಾಶವನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

**ಅರ್ಹತೆ**: ಕೆಳಗಿನ ಮಾನದಂಡಗಳನ್ನು ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಆಹ್ವಾನಿಸಲಾಗಿದೆ:

ಎ) ಪಾರಂಪರಿಕವೈದ್ಯರಾಗಿದ್ದು (ಸಾಂಪ್ರದಾಯಿಕ ಸಮುದಾಯ ಅರೋಗ್ಯ ಪೂರೈಕೆದಾರರು), ತಮ್ಮ ನಿವಾಸವನ್ನು ಸ್ಥಳೀಯ ಸರ್ಕಾರಗಳಿಂದ (ಗ್ರಾಮಪಂಚಾಯತ್/ನಗರಸಭೆ) ಅನುಮೋದಿಸಬೇಕು. ಕೆಳಕಂಡ ವಿಷಯಗಳಲ್ಲಿ ಸಾಂಪ್ರದಾಯಿಕ ಸಮುದಾಯ

ಅರೋಗ್ಯ ಪೂರೈಕೆದಾರರಾಗಿರಬೇಕು: i) ಸಾಮಾನ್ಯ ಕಾಯಿಲೆಗಳು; ii)ಕಾಮಾಲೆ; iii)ಸ್ಂಧಿವಾತ/ಕೀಲು ನೋವು; iv)ಸಾಂಪ್ರದಾಯಿಕ ಮೂಳೆ ಜೋಡಣೆ; v)ಸಾಂಪ್ರದಾಯಿಕ ಜನನ ಪರಿಚಾರಕರು; vi)ವಿಷಕಾರಿ ಕಡಿತ

ಬಿ) **ವಯಸ್ಸು**: 28 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟವರು

ಸಿ) **ಅನುಭವ**: 10 ಅಥವಾ ಅದಕ್ಕೂ ಹೆಚ್ಚಿನ ಅನುಭವವಿರುವವರು (ಮೇಲೆ ತಿಳಿಸಿದ ವಿಷಯಗಳಲ್ಲಿ)

**ಮೌಲ್ಯ ಮಾಪನ ಮಾಧ್ಯಮ**: ಕನ್ನಡ ಮತ್ತು ಇತರ ಸ್ಥಳೀಯ ಭಾಷೆಗಳು

**ಅಭ್ಯರ್ಥಿ ಶುಲ್ಕ**:

A) ಒಂದು ವಿಷಯ/ಕಾಯಿಲೆ ಪ್ರಾಮಾಣಿಕರಣಕ್ಕೆ: ರೂ. 11,500 (18% GST ಸೇರಿದೆ)

B) ಎರಡು ವಿಷಯ/ಕಾಯಿಲೆ ಪ್ರಾಮಾಣಿಕರಣಕ್ಕೆ: ರೂ. 15,000/- (18% GST ಸೇರಿದೆ)

C) ಮೂರು ವಿಷಯ/ಕಾಯಿಲೆ ಪ್ರಾಮಾಣಿಕರಣಕ್ಕೆ: ರೂ. 16,500/- (18% GST ಸೇರಿದೆ)

d) ನಾಲ್ಕು ವಿಷಯ/ಕಾಯಿಲೆ ಪ್ರಾಮಾಣಿಕರಣಕ್ಕೆ: ರೂ. 17,500/- (18% GST ಸೇರಿದೆ)

E) ಐದು ವಿಷಯ/ಕಾಯಿಲೆ ಪ್ರಾಮಾಣಿಕರಣಕ್ಕೆ: ರೂ. 18,500/- (18% GST ಸೇರಿದೆ)

(ಅಭ್ಯರ್ಥಿಯು ಒಂದು ಸಮಯದಲ್ಲಿ ಗರಿಷ್ಠ ಮೂರು ವಿಷಯ/ಕಾಯಿಲೆಗಳಿಗೆ ಮಾತ್ರ ಅರ್ಜಿ ಸಲ್ಲಿಸಬಹುದು)

ಶುಲ್ಕ ಪಾವತಿಯನ್ನು ಕೇವಲ ಡಿಡಿ ಮೂಲಕ ಮಾತ್ರವೇ ಮಾಡಬೇಕು. ಡಿಡಿಯನ್ನು "UTDHST" ಹೆಸರಲ್ಲಿ ತೆಗೆದುಕೊಳ್ಳಬೇಕು. ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಸಂದರ್ಭಗಳಲ್ಲಿ ಮರುಪಾವಲಾವತಿಸಲು ಆಗುವುದಿಲ್ಲ.

**ಭೌಗೋಳಿಕ ಪ್ರದೇಶಗಳು**: ಕರ್ನಾಟಕ

**ತಂಡದ ಕನಿಷ್ಠ ಸಂಖ್ಯೆಯ ಅಭ್ಯರ್ಥಿಗಳು**: 10

**ವಿಧಾನ, ಅವಧಿ ಮತ್ತು ಮೌಲ್ಯಮಾಪನದ ತೂಕ**: ಆಯುಷ್ ವೈದ್ಯರು, (1) ತಜ್ಞ TCHP (2) ಮತ್ತು ಸಮುದಾಯ ಆರೋಗ್ಯ ಅಥವಾ ಸಾರ್ವಜನಿಕ ಅರೋಗ್ಯ ತಜ್ಞರೊಬ್ಬರು (1) ಒಳಗೊಂಡಿರುವ, ಸಂಬಂಧಿತ ವಿಷಯಗಳಲ್ಲಿ ತಜ್ಞರಾಗಿರುವ, ಮೌಲ್ಯಮಾಪಕರ ಸಮಿತಿಯಿಂದ ಮೌಲ್ಯಮಾಪನಕ್ಕೆ ಹಾಜರಾಗಲು ಅರ್ಹ ಅಭ್ಯರ್ಥಿಗಳಿಗೆ ಸೂಚಿಸಲಾಗುವುದು.

ಅಭ್ಯರ್ಥಿಗಳ ಪ್ರಮಾಣೀಕರಣ ಪ್ರಕ್ರಿಯೆ / ಮೌಲ್ಯಮಾಪನವನ್ನು ಈ ಕೆಳಗಿನ ವಿಧಾನಗಳು, ಅವಧಿ ಮತ್ತು ತೂಕದ ಪ್ರಕಾರ ಮಾಡಲಾಗುತ್ತದೆ:

1. ಮೌಖಿಕ ಬಹು ಆಯ್ಕೆ ಪ್ರಶ್ನಾವಳಿ ಮೂಲದ ಜ್ಞಾನ ಮೌಲ್ಯಮಾಪನ: ~ 30 ನಿಮಿಷಗಳು, 10%

2.ರೋಗಿಯ ಪ್ರಕರಣ ಪ್ರಸ್ತುತಿ: ~ 30 ನಿಮಿಷಗಳು, 10%

3. ರೋಗಿಯ ಪ್ರಕರಣ ಪ್ರಸ್ತುತಿ ಕುರಿತು ಪ್ರಶ್ನೆಗಳು: ~ 30 ನಿಮಿಷಗಳು, 10%

4. ಔಷಧೀಯ ಸಸ್ಯಗಳ ಗುರುತಿಸುವಿಕೆ, ಔಷಧಗಳ ತಯಾರಿಕೆ, ಕಚ್ಚಾ ಔಷಧಗಳ ಸಂಗ್ರಹ ಮತ್ತು ಸಿದ್ಧತೆಗಳ ಗುಣಮಟ್ಟದ ಬಗ್ಗೆ ಪ್ರಾಯೋಗಿಕ ಪ್ರದರ್ಶನ: ~ 30 ನಿಮಿಷಗಳು, 30%

5. TCHP ನ ಕೆಲಸ ಪರಿಸರದಲ್ಲಿ ಕ್ಷೇತ್ರ ಪರಿಶೀಲನೆ: ~ 60 ನಿಮಿಷಗಳು, 40%

ಸಾಮರ್ಥ್ಯದ ಮೌಲ್ಯಮಾಪನದಲ್ಲಿ ಕನಿಷ್ಠ 70% ಅಂಕಗಳನ್ನು ಪಡೆದುಕೊಂಡು ಸಾಂಪ್ರದಾಯಿಕ ಸಮುದಾಯ ಅರೋಗ್ಯ ಪೂರೈಕೆದಾರ ಅಭ್ಯರ್ಥಿಗಳಿಗೆ ಮಾತ್ರವೇ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.

**ಮೌಲ್ಯಮಾಪನ ಸಮಿತಿ:**

ಸಂಬಂಧಿತ ವಿಷಯದಲ್ಲಿ ಕನಿಷ್ಠ 20 ವರ್ಷಗಳ ಅನುಭವ ಹೊಂದಿರುವ TCHP ಗಳು (2), ಆಯುರ್ವೇದ ಅಥವಾ ಸಿದ್ಧ ಅಥವಾ ಯುನಾನಿ ವೈದ್ಯರು (1) ಮತ್ತು ಸಮುದಾಯ ಅರೋಗ್ಯ ಅಥವಾ ಸಾರ್ವಜನಿಕ ಅರೋಗ್ಯ ತಜ್ಞರು (1). ಪ್ರಮಾಣ ಪತ್ರ ಪಡೆದ, ಪ್ರಮಾಣಪತ್ರವನ್ನು ನಿಷೇಧಿಸಲಾದ, ಪ್ರಮಾಣಪತ್ರವನ್ನು ಹಿಂತೆಗೆದುಕೊಂಡ TCHP ಗಳ ಹೆಸರುಗಳನ್ನು ವೆಬ್ಸೈಟ್ ಅಲ್ಲಿ ಪ್ರದರ್ಶಿಸಲಾಗುವುದು.

TCHP ಗಳು ಹಾಗೂ ಇತರರು ತಮ್ಮ ಮೇಲ್ಮನವಿಯನ್ನು ಮತ್ತು/ ಅಥವಾ ದೂರುಗಳನ್ನು ಸಲ್ಲಿಸಲು ಅಪೇಕ್ಷಿಸುವವವರು ಕೇಂದ್ರ ಮುಖ್ಯಸ್ಥರು, CLHT&P ಕೇಂದ್ರವನ್ನು ಕೆಳಗೆ ನೀಡಲಾದ ವಿಳಾಸದಲ್ಲಿ ಸಂಪರ್ಕಿಸಬಹುದು.

**ದೂರುಗಳು ಮತ್ತು ಮೇಲ್ಮನವಿಗಳು:**

ಪ್ರಾಮಾಣಿಕರಣ ಪ್ರಕ್ರಿಯೆ ಅಥವಾ ಯೋಜನೆಗೆ ಸಂಬಂಧಿಸಿದಂತೆ ಯಾವುದೇ ದೂರುಗಳು ಅಥವಾ ಮೇಲ್ಮನವಿಗಳನ್ನು ವ್ಯವಸ್ಥಾಪನ ಸಮಿತಿಯ ಅಧ್ಯಕ್ಷರ ಗಮನಕ್ಕೆ ತರಬಹುದು. ವ್ಯವಸ್ಥಾಪನ ಸಮಿತಿಯು ಸಾಂಪ್ರದಾಯಿಕ ಸಮುದಾಯ ಆರೋಗ್ಯ ಪೂರೈಕೆದಾರರು(TCHPs), ಪ್ರಮಾಣೀಕೃತ TCHP ಗಳ ಸೇವೆಗಳ ಬಳಕೆದಾರರು ಅಥವಾ ಇನ್ನಾವುದೇ ಪಾಲುದಾರರಿಂದ ದೂರುಗಳನ್ನು ನಿರ್ವಹಿಸುತ್ತದೆ. ವ್ಯವಸ್ಥಾಪನ ಸಮಿತಿಯ ಅಧ್ಯಕ್ಷರ ಸಂಪರ್ಕ ವಿವರಗಳನ್ನು ಇಲ್ಲಿ ಕೆಳಗೆ ನೀಡಲಾಗಿದೆ.

**<u>For more Details contact:</u>**

**Dr Leena Chandra Wadia**

Dean, Education and Outreach (Chairperson) Managing Committee, Member,

Complaints Sub-Committee

**Prof. G. Hariramamurthi**

Head, TDU Personnel Certification Body

Email: g.hari@tdu.edu.in

Mobile: +91 9448372020

https://www.tdu.edu.in/tdu-vcstchp

**Shri Suresh Hegde**

Joint Registrar, Finance, Accounts and Administration and

Member, Appeals Sub-Committee

**Dr B N Prakash,**

Member, Managing Committee and

Member, Complaints Sub-Committee

**Dr Girish Kumar**

Member, Managing Committee and

Member, Appeals Sub-Committee

The University of Trans-disciplinary Health Sciences and Technology, #74/2,

Jarakabande Kaval, Attur Post, Via Yelahanka, Bengaluru-560064.Ph: + 91-80-

2856 8000